## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಶ್ರೀಮತಿ ಬಿ.ಕೆ.ಪೂವಮ್ಮ, ಹಿಂದಿನ ನಗದು ಗುಮಾಸ್ತರು, ಕ್ಷೇತ್ರಾಭಿವೃದ್ಧಿ ಅಧಿಕಾರಿಗಳ ಕಛೇರಿ, ಪೊನ್ನಂಪೇಟೆ, ಕೊಡಗು ಜಿಲ್ಲೆ ಇವರನ್ನು ಆರೋಪಮುಕ್ತಗೊಳಿಸುವ ಬಗ್ಗೆ ಆದೇಶ.

ಓದಲಾಗಿದೆ: 1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಕೊಡಗು ಜಿಲ್ಲಾ ಪಂಚಾಯಿತಿ, ಮಡಿಕೇರಿ ಇವರ ಪತ್ರ ಸಂಖ್ಯೆ: ಜಡ್‌ಪಿಕೆ/ಎಡಿಎಂ/109/1989-90 ದಿನಾಂಕ: 31-09-1990.

2. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 66 ಇಎನ್‌ಕ್ಯೂ 1990 ದಿನಾಂಕ: 21-08-1992.

3. ಲೋಕಾಯುಕ್ತರವರ ವಿಚಾರಣಾ ವರದಿ ಸಂಖ್ಯೆ: ಎಲ್‌ಒಕೆ/ ಎಆರ್‌ಇ-4/ಇಎನ್‌ಕ್ಯೂ/25/1992-93 ದಿನಾಂಕ:30-10-1994.

4. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 41 ವಿಸೇಬಿ 1996 ದಿನಾಂಕ: 20-04-1998.

5. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 41 ವಿಸೇಬಿ 1996 ದಿನಾಂಕ: 08-11-2010.

6. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಕೊಡಗು ಜಿಲ್ಲಾ ಪಂಚಾಯಿತಿ, ಮಡಿಕೇರಿ, ಇವರ ಪತ್ರ ಸಂಖ್ಯೆ: ಕೊಜಿಪಂ/ಆಡಳಿತ/4/ ಆಡಳಿತ/ ಶಿಸ್ತು/27/2013-14 ದಿನಾಂಕ: 3-9-2014.

---

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಪತ್ರದನ್ವಯ ಶ್ರೀ ಎಂ.ಚಂದ್ರಶೇಖರ್, ಹಿಂದಿನ ಕ್ಷೇತ್ರಾಭಿವೃದ್ಧಿ ಅಧಿಕಾರಿ, ಶ್ರೀಮತಿ ಬಿ.ಕೆ.ಪೂವಮ್ಮ, ನಗದು ಗುಮಾಸ್ತರು ಮತ್ತು ಶ್ರೀಮತಿ ಬಿ.ಎಲ್.ರಾಧ, ವ್ಯವಸ್ಥಾಪಕರು, ಕ್ಷೇತ್ರಾಭಿವೃದ್ಧಿ ಅಧಿಕಾರಿಯವರ ಕಛೇರಿ, ಪೊನ್ನಂಪೇಟೆ, ಕೊಡಗು ಜಿಲ್ಲೆ ಇವರುಗಳು ತಮ್ಮ ಕಾರ್ಯ ಅವಧಿಯಲ್ಲಿ ಎಸಗಿರುವ ಆರ್ಥಿಕ ಅವ್ಯವಹಾರ / ದುರ್ನಡತೆ ಕುರಿತಂತೆ ಸದರಿಯವರುಗಳ ವಿರುದ್ಧ ಕರ್ನಾಟಕ ನಾಗರೀಕ ಸೇವೆ (ವ.ನಿ.ಮೇ) ನಿಯಮಗಳು 1957ರ ನಿಯಮ-11 ನ್ನು ಓದುವುದರೊಂದಿಗೆ ನಿಯಮ-13 ರಡಿ ಇಲಾಖಾ ವಿಚಾರಣೆ ಜರುಗಿಸಲು ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಸರ್ಕಾರದ ಆದೇಶದಲ್ಲಿ ಇಲಾಖಾ ವಿಚಾರಣೆ ನಡೆಸಲು ಪ್ರಕರಣವನ್ನು ಕರ್ನಾಟಕ ಲೋಕಾಯುಕ್ತರಿಗೆ ವಹಿಸಲಾಗಿತ್ತು.

ಮೇಲ್ಕಂಡ ಸದರಿ ಆದೇಶದಂತೆ, ಕರ್ನಾಟಕ ಲೋಕಾಯುಕ್ತ ಕಛೇರಿಯ ಉಪ ನಿಬಂಧಕರು, ಈ ಪ್ರಕರಣದ ಬಗ್ಗೆ ಇಲಾಖಾ ವಿಚಾರಣೆ ನಡೆಸಿ ವಿಚಾರಣಾ ವರದಿಯನ್ನು ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ದಿನಾಂಕ: 30-10-1994 ರನ್ವಯ ಸರ್ಕಾರಕ್ಕೆ ಸಲ್ಲಿಸಿರುತ್ತಾರೆ. ಸದರಿ ವಿಚಾರಣಾ ವರದಿಯಲ್ಲಿ, ಶ್ರೀ ಎಂ. ಚಂದ್ರಶೇಖರ್, ಹಿಂದಿನ ಕ್ಷೇತ್ರಾಭಿವೃದ್ಧಿ ಅಧಿಕಾರಿ ಮತ್ತು ಶ್ರೀಮತಿ ಬಿ.ಕೆ.ಪೂವಮ್ಮ, ಇವರುಗಳ ವಿರುದ್ಧದ ಮೂರು ಆರೋಪಗಳ ಪೈಕಿ ಎರಡು ಆರೋಪಗಳು ರುಜುವಾತಾಗಿರುವುದಾಗಿ ವರದಿಸಲಾಗಿದ್ದು, ಸದರಿ ವರದಿಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಕಂದಾಯ ಇಲಾಖೆಯ ಸಹಮತಿಯೊಂದಿಗೆ ಮೇಲೆ ಓದಲಾದ ಕ್ರಮ ಸಂಖ್ಯೆ (4)ರ ಆದೇಶದಲ್ಲಿ ಆಪಾದಿತ ಅಧಿಕಾರಿ / ನೌಕರರ ವಿರುದ್ಧ ಈ ಕೆಳಕಂಡಂತೆ ದಂಡನೆಯನ್ನು ವಿಧಿಸಿ ಆದೇಶಿಸಲಾಗಿತ್ತು.

1) ಶ್ರೀ ಎಂ.ಚಂದ್ರಶೇಖರ್, ಹಿಂದಿನ ಕ್ಷೇತ್ರಾಭಿವೃದ್ಧಿ ಅಧಿಕಾರಿ, ಇವರು ಈಗ ಪಡೆಯುತ್ತಿರುವ ವೇತನವನ್ನು ಈಗಿನ ವೇತನ ಶ್ರೇಣಿಯ ಕನಿಷ್ಠ ಮಟ್ಟದ ವೇತನಕ್ಕೆ 5 ವರ್ಷಗಳ ಕಾಲ ಜಾರಿಯಲ್ಲಿರುವಂತೆ ಇಳಿಸಿ, ತದನಂತರ ಅವರ ವೇತನವನ್ನು ಪುನರ್ ನಿಗದಿಪಡಿಸಿ ವೇತನವನ್ನು ನೀಡುವುದು.

2) ಶ್ರೀಮತಿ ಬಿ.ಎಲ್.ರಾಧಾ, ವ್ಯವಸ್ಥಾಪಕರು, ಇವರ ಮೇಲಿನ ಆರೋಪಗಳು ರುಜುವಾಗಿಲ್ಲದ ಕಾರಣ ಇವರನ್ನು ಆಪಾದನೆಗಳಿಂದ ಮುಕ್ತಗೊಳಿಸಿದೆ.

3) ಶ್ರೀಮತಿ ಬಿ.ಕೆ.ಪೂವಮ್ಮ, ನಗದು ಗುಮಾಸ್ತರು, ಇವರ ಮೇಲಿನ ಆರೋಪಗಳು ರುಜುವಾತಾಗಿರುವುದರಿಂದ ಇವರಿಂದ ಸರ್ಕಾಋಕ್ಕೆ ಉಂಟಾಗಿರುವ ರೂ. 56,502-35 ಗಳನ್ನು ಇವರ ನಿವೃತ್ತಿ ಉಪದಾನಗಳಿಂದ ಸಂದಾಯವಾಗುವ ಹಣದಿಂದ ಒಂದೇ ಇಡಿಗಂಟಿನಲ್ಲಿ ವಸೂಲು ಮಾಡಲು ಹಾಗೂ ಕೆ.ಸಿಎಸ್.(ಸಿಸಿಎ) ನಿಯಮಗಳು 1957ರ ನಿಯಮ-8(vi) ರನ್ವಯ ಕಡ್ಡಾಯ ನಿವೃತ್ತಿಗೊಳಿಸಿದೆ.

ಶ್ರೀಮತಿ ಬಿ.ಕೆ.ಪೂವಮ್ಮ, ನಗದು ಗುಮಾಸ್ತರು ಇವರು, ಮೇಲ್ಕಂಡ ಸದರಿ ಆದೇಶವನ್ನು ಪ್ರಶ್ನಿಸಿ, ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ಸಲ್ಲಿಸಿದ್ದ ಅರ್ಜಿ ಸಂಖ್ಯೆ: 167/1999 ರಲ್ಲಿ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ದಿನಾಂಕ: 9-4-2010 ರಲ್ಲಿ ಈ ಕೆಳಕಂಡಂತೆ ಆದೇಶಿಸಿರುತ್ತದೆ.

## ORDER

1. The application is allowed.
2. The impugned order dated 20-4-1998 (Annexure-A-7) passed by the Government is set aside.
3. Liberty is reserved to the Respondents to proceed with the inquiry from the stage of infirmity, i.e., examination of the relevant witnesses and documents and consideration of the defence brief submitted by the Applicant, in accordance with the provisions of the CCA Rules.
4. The recovery of Rs. 56,502-35 from the Applicant shall be subject to the result of further disciplinary proceedings
5. When this Application was filed in the year 1999, the Applicant was aged about 54 years. Now the must be 65 years of age. Therefore the question of reinstatement of the Applicant into service would not arise.

ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ನೀಡಿರುವ ಮೇಲ್ಕಂಡ ಆದೇಶದಂತೆ, ಅರ್ಜಿದಾರರಾದ ಶ್ರೀಮತಿ ಬಿ.ಕೆ.ಪೂವಮ್ಮ, ನಗದು ಗುಮಾಸ್ತರು ಇವರಿಗೆ ಸೀಮಿತವಾಗಿ ಲೋಪ ಉಂಟಾಗಿರುವ ಹಂತದಿಂದ ಮುಂದುವರೆದ ಇಲಾಖಾ ವಿಚಾರಣೆ ನಡೆಸಲು ಮೇಲೆ ಓದಲಾದ ಕ್ರಮ ಸಂಖ್ಯೆ (5)ರ ಆದೇಶದಲ್ಲಿ ಉಪ. ಕಾರ್ಯದರ್ಶಿ, ಜಿಲ್ಲಾ ಪಂಚಾಯಿತಿ, ಕೊಡಗು ಇವರನ್ನು ವಿಚಾರಣಾಧಿಕಾರಿಯನ್ನಾಗಿ ಮತ್ತು ಸಹಾಯಕ ಕಾರ್ಯದರ್ಶಿ, ಜಿಲ್ಲಾ ಪಂಚಾಯಿತಿ, ಕೊಡಗು ಇವರನ್ನು ಮಂಡನಾಧಿಕಾರಿಯನ್ನಾಗಿ ನೇಮಿಸಲಾಗಿತ್ತು. ಸದರಿ ಆದೇಶದನ್ವಯ ವಿಚಾರಣಾಧಿಕಾರಿಯವರು, ಇಲಾಖಾ ವಿಚಾರಣೆ ನಡೆಸಿ, ಸರ್ಕಾರಕ್ಕೆ ಸಲ್ಲಿಸಿರುವ ವಿಚಾರಣಾ ವರದಿಯಲ್ಲಿ ಆರೋಪಿತರ ಮೇಲಿನ ಆರೋಪಗಳು ರುಜುವಾತಾಗಿರುವುದಿಲ್ಲವೆಂದು ವರದಿಸಿರುತ್ತಾರೆ.

ವಿಚಾರಣಾಧಿಕಾರಿಯವರು ಸಲ್ಲಿಸಿರುವ ವಿಚಾರಣಾ ವರದಿಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿದ್ದು, ಶಿಸ್ತು ಪ್ರಾಧಿಕಾರದ ಪರ ಯಾವುದೇ ದಾಖಲೆಗಳು ಲಭ್ಯವಿಲ್ಲದೇ ಇರುವುದರಿಂದ ಹಾಗೂ ಶಿಸ್ತು ಪ್ರಾಧಿಕಾರದ ಪರ ಸಾಕ್ಷಿಗಳು ಆರೋಪಿತರ ಮೇಲಿನ ಆರೋಪಗಳನ್ನು ರುಜುವಾತುಪಡಿಸುವಲ್ಲಿ ವಿಫಲರಾಗಿರುವ ಕಾರಣ ಅವರ ವಿರುದ್ಧದ ಆರೋಪಗಳು ರುಜುವಾತಾಗಿಲ್ಲವೆಂಬ ನಿರ್ಣಯಕ್ಕೆ ವಿಚಾರಣಾಧಿಕಾರಿಗಳು ಬಂದಿದ್ದು, ಸದರಿ ವಿಚಾರಣಾ ವರದಿ ಬಗ್ಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಕೊಡಗು

ಇವರ ಅಭಿಪ್ರಾಯವನ್ನು ಪಡೆಯಲಾಗಿದ್ದು, ಸದರಿಯವರು ಮೇಲೆ ಓದಲಾದ ಕ್ರಮಸಂಖ್ಯೆ(6)ರ ದಿನಾಂಕ: 3-9-2014ರ ತಮ್ಮ ಪತ್ರದಲ್ಲಿ ಶಿಸ್ತು ಪ್ರಾಧಿಕಾರದ ಪರ ಸಾಕ್ಷಿಗಳು ಆರೋಪಿತರ ಮೇಲಿನ ಆರೋಪಗಳನ್ನು ಸಾಬೀತುಪಡಿಸುವಲ್ಲಿ ವಿಫಲರಾಗಿರುತ್ತಾರೆ. ಆರೋಪಿತ ನೌಕರರು ತಮ್ಮ ವಾದದಲ್ಲಿ ಅವರ ಮೇಲೆ ಹೊರಿಸಲಾಗಿರುವ ಆರೋಪಗಳು ಅಸ್ಪಷ್ಟ ಹಾಗೂ ಅನಿರ್ದಿಷ್ಟವಾಗಿರುತ್ತವೆ. ವಿಚಾರಣಾ ಸಮಯದಲ್ಲಿ ಆರೋಪಗಳನ್ನು ಸಮರ್ಥಿಸಬಹುದಾದ ಪೂರಕವಾದ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಮತ್ತು ಪ್ರಕರಣವು 1988-89ನೇ ಸಾಲಿನದ್ದಾಗಿರುತ್ತದೆ. ಯಾವುದೇ ಪ್ರಕರಣವು ಮೂರುವರೆ ವರ್ಷಗಳಿಂದ ಎಂಟು ವರ್ಷಗಳ ಅವಧಿಯೊಳಗೆ ತೀರ್ಮಾನಿಸದೇ ವಿಳಂಬಗೊಂಡಲ್ಲಿ ಅಂತಹ ಪ್ರಕರಣಗಳು ಊರ್ಜಿತವಾಗಿರುವುದಿಲ್ಲ. ಹಾಗೂ ಅಂತಹ ಪ್ರಕರಣಗಳನ್ನು ಕೈಬಿಡಬೇಕೆಂದು ಘನ ನ್ಯಾಯಾಲಯಗಳು ಘೋಷಿಸಿವೆ ಎಂದು ಸದರಿ ಪ್ರಕರಣಕ್ಕೆ ಸಮನಾಗಿ ಅನ್ವಯವಾಗುವಂಥಹ ನ್ಯಾಯಾಲಯದ ಘೋಷಣೆಗಳನ್ನು ಲಿಖಿತವಾಗಿ ಪ್ರತಿಪಾದಿಸಿರುವುದರಿಂದ ಹಾಗೂ ವಿಚಾರಣಾ ವರದಿಯಲ್ಲಿ ಆರೋಪಿತರ ಮೇಲಿನ ಆರೋಪಗಳು ಸಾಬೀತಾಗದೇ ಇರುವುದರಿಂದ ವಿಚಾರಣೆ ಪ್ರಕ್ರಿಯೆಯನ್ನು ನಿಯಮಗಳ ಪ್ರಕಾರ ಮುಕ್ತಾಯಗೊಳಿಸಬಹುದಾಗಿದೆ ಎಂದು ಅಭಿಪ್ರಾಯ ನೀಡಿರುತ್ತಾರೆ.

ವಿಚಾರಣಾಧಿಕಾರಿಯವರು ಸಲ್ಲಿಸಿರುವ ವಿಚಾರಣಾ ವರದಿ, ಸಂಬಂಧಿಸಿದ ದಾಖಲಾತಿಗಳು ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಸಲ್ಲಿಸಿರುವ ಅಭಿಪ್ರಾಯವನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 84 ವಿಸೇಇ 2010, ಬೆಂಗಳೂರು, ದಿನಾಂಕ:28-04-2010.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಶ್ರೀಮತಿ ಬಿ.ಕೆ.ಪೂವಮ್ಮ, ಹಿಂದಿನ ನಗದು ಗುಮಾಸ್ತರು, ಕ್ಷೇತ್ರಾಭಿವೃದ್ಧಿ ಅಧಿಕಾರಿಗಳ ಕಛೇರಿ, ಪೊನ್ನಂಪೇಟೆ ತಾಲ್ಲೂಕ, ಕೊಡಗು ಜಿಲ್ಲೆ, ಇವರ ವಿರುದ್ಧದ ಶಿಸ್ತುಕ್ರಮವನ್ನು ಕೈಬಿಟ್ಟು, ಅವರ ವಿರುದ್ಧದ ಆರೋಪಗಳಿಂದ ಮುಕ್ತಗೊಳಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ವಿ.ಹನುಮಂತಯ್ಯ),
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಗೆ,

1. ಮಹಾಲೇಖಪಾಲರು (ಎ ಮತ್ತು ಇ), ಕರ್ನಾಟಕ, ಬೆಂಗಳೂರು.
2. ಉಪ ನಿಬಂಧಕರು, ವಿಚಾರಣೆಗಳು-4, ಕರ್ನಾಟಕ ಲೋಕಾಯುಕ್ತರವರ ಕಛೇರಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು-1.
3. ಜಿಲ್ಲಾಧಿಕಾರಿ, ಕೊಡಗು ಜಿಲ್ಲೆ, ಮಡಿಕೇರಿ.
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಕೊಡಗು ಜಿಲ್ಲಾ ಪಂಚಾಯತ್, ಮಡಿಕೇರಿ
5. ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು), ಕಂದಾಯ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
6. ಸಂಬಂಧಿಸಿದ ನೌಕರರಿಗೆ (ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಕೊಡಗು ಜಿಲ್ಲಾ ಪಂಚಾಯತ್, ಮಡಿಕೇರಿ ಇವರ ಮುಖಾಂತರ).
7. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು.
8. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ / ಕಾರ್ಯದರ್ಶಿ / ಜಂಟಿ ಕಾರ್ಯದರ್ಶಿ(ಆಡಳಿತ) / ಉಪ ಕಾರ್ಯದರ್ಶಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತರ ಸಹಾಯಕರು.
9. ಮೇಲ್ವಿಚಾರಕರು, ಗಣಕ ಕೋಶ,
10. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.

Sbp/-